# ಆಗ ಸಹಪಾಠಿಗಳು ಈಗ ಸಹವರ್ತಿಗಳು

■ ಡಿ.ಎಂ. ಘನಶ್ಯಾಮ

**ಭಾರತದ ಮೂರೂ ಸೇನಾಪಡೆ ಮುಖ್ಯಸ್ಥರ ಬಾಲ್ಯ ವಾಯುಪಡೆಯೊಂದಿಗೆ ಬೆಸೆದುಕೊಂಡಿದೆ. ಮೂವರೂ ನ್ಯಾಷನಲ್ ಡಿಫೆನ್ಸ್ ಅಕಾಡೆಮಿಯ 56ನೇ ಬ್ಯಾಚ್‌ಗೆ ಸೇರಿದವರು ಹಾಗೂ ಮೂವರಿಗೂ ಸಶಸ್ತ್ರ ಪಡೆಗಳಿಗೆ ಅಧಿಕಾರಿಗಳಾಗಿ ಸೇವೆಯ ಆದೇಶ ಸಿಕ್ಕಿದ್ದು 1980ರಲ್ಲಿ.**




ಜನರಲ್ ಮನೋಜ್ ಮುಕುಂದ್ ನರವಾಣೆ

ಭೂಸೇನೆಯ ಮುಖ್ಯಸ್ಥರಾಗಿ ಮನೋಜ್ ಮುಕುಂದ್ ನರವಾಣೆ ಈಚೆಗಷ್ಟೇ (ಡಿ.31) ಅಧಿಕಾರ ಸ್ವೀಕರಿಸಿದರು. ಸೇನಾ ವಲಯದಲ್ಲಿ 'ಚೀನಾ ತಜ್ಞ' ಎಂಬ ಗೌರವ ಸಂಪಾದಿಸಿಕೊಂಡಿರುವ ನರವಾಣೆ ಸೇವಾ ಹಿರಿತನ, ಕಾರ್ಯಕ್ಷಮತೆಯ ಮಾನದಂಡಗಳಲ್ಲಿ ಪುಟಿದೆದ್ದು ಬಂದವರು. ಈ ಹಿಂದೆ ಹಲವು ಬಾರಿ ಸಶಸ್ತ್ರಪಡೆಗಳ ಮುಖ್ಯಸ್ಥರ ಹುದ್ದೆಗೆ ಬಡ್ತಿ ನೀಡುವಾಗ ಹಿರಿತನವನ್ನು ಕಡೆಗಣಿಸಿ ಅರ್ಹತೆಗೆ ಸರ್ಕಾರ ಮಣೆಹಾಕಿತ್ತು. 'ಇದು ಸರಿಯೆಂದು' ಸುಪ್ರೀಂ ಕೋರ್ಟ್ ಸಹ ಹೇಳಿತ್ತು.

ಕಾಶ್ಮೀರ ಕಣಿವೆ ಹಾಗೂ ಈಶಾನ್ಯ ರಾಜ್ಯಗಳಲ್ಲಿ ನುಸುಳುಕೋರರ ವಿರುದ್ಧ ಹತ್ತಾರು ಕಾರ್ಯಾಚರಣೆಗಳ ತಂತ್ರ ಹೆಣೆದ ಅನುಭವ ಜನರಲ್ ನರವಾಣೆ ಅವರದು. ಸೇನೆಯ ಉಪ ಮುಖ್ಯಸ್ಥರಾಗುವ ಮೊದಲು ಚೀನಾ ಗಡಿಯ (ಪೂರ್ವ ದಿಕ್ಕಿನಲ್ಲಿ) ಕಾವಲು ಹೊಣೆ ಹೊತ್ತ ಭೂಸೇನೆಯ ಪೂರ್ವ ಕಮಾಂಡ್‌ನ ಕಮಾಂಡರ್ ಆಗಿದ್ದರು.

ರಕ್ಷಣಾ ವ್ಯವಹಾರಗಳ ವಿಚಾರದಲ್ಲಿ ಭಾರತಕ್ಕೆ ಪಾಕಿಸ್ತಾನಕ್ಕಿಂತಲೂ ಚೀನಾ ದೇಶವೇ ದೊಡ್ಡ ತಲೆಬಿಸಿ. ಈ ಹಿನ್ನೆಲೆಯಲ್ಲಿಯೇ ಭಾರತ–ಚೀನಾ ಗಡಿಯ ಪ್ರತಿ ಇಂಚಿನ ಜ್ಞಾನವಿರುವ 'ಚೀನಾ ತಜ್ಞ' ನರವಾಣೆ ಅವರನ್ನು ಭೂಸೇನೆಯ ಮುಖ್ಯಸ್ಥರಾಗಿ ನೇಮಿಸಿರುವ ವಿಚಾರ ಮಹತ್ವ ಪಡೆದುಕೊಂಡಿದೆ. ಇದು ಚೀನಾಕ್ಕೆ ಭಾರತ ಕೊಟ್ಟ



ಅಡ್ಮಿರಲ್ ಕರಮ್‌ಬೀರ್ ಸಿಂಗ್

ಸಂದೇಶ ಎಂದೂ ಕೆಲವರು ವಿಶ್ಲೇಷಿಸುತ್ತಾರೆ.

ಪಾಕಿಸ್ತಾನದಲ್ಲಿ ಗ್ವಾದರ್, ಶ್ರೀಲಂಕಾದಲ್ಲಿ ಹಂಬಂತೋಟ, ಬಾಂಗ್ಲಾದಲ್ಲಿ ಚಿತ್ತಗಾಂಗ್ ಮತ್ತು ಸನೋಡಿಯಾ, ಮ್ಯಾನ್ಮಾರ್‌ನ ಕ್ಯೂಪ್‌ಕ್ಯೂ ಕಿನಾರೆಗಳಲ್ಲಿ ಬಂದರು ಕಟ್ಟುವ ಮೂಲಕ ಭಾರತವನ್ನು ಸುತ್ತುವರಿಯುವ ಮತ್ತು ನಿರ್ಣಾಯಕ ಸಂದರ್ಭದಲ್ಲಿ ಭಾರತಕ್ಕೆ ದಿಗ್ಬಂಧನ ಹಾಕುವ ದೀರ್ಘಕಾಲದ ಯೋಜನೆಗಳಿಗೆ ಚೀನಾ ಬಹುಹಿಂದೆಯೇ ಚಾಲನೆ ನೀಡಿದೆ. ಇದಕ್ಕೆ ಪ್ರತಿಯಾಗಿ ಇರಾನ್‌ನ ಚಾಬಹಾರ್, ಹಿಂದೂ ಮಹಾಸಾಗರದ ಮಾಲ್ಡೀವ್ಸ್, ದಕ್ಷಿಣ ಚೀನಾ ಸಮುದ್ರದಲ್ಲಿ ವಿಯೆಟ್ನಾಂ, ಶಾಂತ ಸಾಗರದಲ್ಲಿ ಜಪಾನ್ ಜೊತೆಗೆ ಭಾರತ ಹಲವು ಒಪ್ಪಂದಗಳನ್ನು ಮಾಡಿಕೊಂಡು ನಮ್ಮ ನೌಕಾಪಡೆಯ ನೌಕೆಗಳಿಗೆ ಪ್ರವೇಶದ ಖಾತ್ರಿ ಪಡೆದುಕೊಂಡಿದೆ. ಸದಾ ಚಾಲ್ತಿಯಲ್ಲಿರುವ ಈ ಚದುರಂಗದ ಮತ್ತೊಂದು ನಡೆ ಜನರಲ್ ನರವಾಣೆ ಅವರಿಗೆ ಸಿಕ್ಕ ಮುಖ್ಯಸ್ಥರ ಸ್ಥಾನ.

ಭವಿಷ್ಯದ ಸೂಪರ್‌ಪವರ್‌ಗಳಾದ ಈ ಎರಡೂ ದೇಶಗಳ ನಡುವೆ ಗಡಿ ವಿವಾದ ಇನ್ನೂ ಜೀವಂತ. ತೆರೆಯ ಮೇಲೆ ಕಾಣುವಂತೆ ಗುದ್ದಾಟ ಕಡಿಮೆಯಿದ್ದರೂ, ತೆರೆಮರೆಯ ಮುಸುಕಿನ ಗುದ್ದಾಟ ಮತ್ತು ಅಪನಂಬಿಕೆ ಎರಡೂ ದೇಶಗಳ ನಡುವೆ ಇದೆ. ಅಂಡಮಾನ್ ಸಮೀಪದ

